ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ನೂರ ನಲವತ್ತೆರಡನೆಯ ಅಧಿವೇಶನ

ಸೋಮವಾರ, ದಿನಾಂಕ: 14ನೇ ಡಿಸೆಂಬರ್, 2020

ಕಾನೂನು ಬಾಹಿರವಾಗಿ ವೈದ್ಯರು ಕಾರ್ಯನಿರ್ವಹಿಸುತ್ತಿರುವ ಬಗ್ಗೆ

ಶ್ರೀ ಪ್ರಾಣೇಶ್ ಎಂ.ಕೆ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

639(630) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಆರೋಗ್ಯ ಇಲಾಖೆಯಲ್ಲಿನ ಆಹಾರ ಸುರಕ್ಷತಾ ವಿಭಾಗದಲ್ಲಿ ಉಪ ಆಯುಕ್ತರು (ಆಡಳಿತ) ಹಾಗೂ ಉಪ ಆಯುಕ್ತರು (ಸ್ಕ್ವಾಡ್) ಎರಡು ಹುದ್ದೆಗಳಿಗೆ ಕೆ.ಎ.ಎಸ್. ಅಧಿಕಾರಿಗಳನ್ನೇ ನೇಮಕ ಮಾಡಬೇಕಾಗಿದ್ದು, ಈ ಹುದ್ದೆಗಳಲ್ಲಿ ಕಾನೂನುಬಾಹಿರವಾಗಿ ವೈದ್ಯರುಗಳೇ ಕಾರ್ಯನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಕುರಿತು ಯಾವ ಕ್ರಮ ಕೈಗೊಳ್ಳಲಾಗಿದೆ;

(ಆ) ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶಗಳನ್ನು ಉಲ್ಲಂಘಿಸಿ ನೂರಾರು ವೈದ್ಯರುಗಳು ಆಹಾರ ಸುರಕ್ಷತಾಧಿಕಾರಿಗಳನ್ನಾಗಿ ಹಾಗೂ ಅಂಕಿತ ಅಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದು, ಇವರುಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಕೋವಿಡ್-19 ಹಾಗೂ ಇಲಾಖೆಯ ಇತರೆ ಕಾರ್ಯಕ್ರಮಗಳಿಗೆ ನಿಯೋಜಿಸಲು ಸರ್ಕಾರಕ್ಕೆ ಇರುವ ಅಡೆತಡೆಗಳೇನು; ಸದರಿ ವೈದ್ಯರುಗಳನ್ನು ಆಹಾರ ಸುರಕ್ಷತಾ ವಿಭಾಗದಿಂದ ಹಿಂಪಡೆಯಲಾಗುವುದು ಯಾವಾಗ;

(ಇ) ಕೆ.ಎ.ಟಿ. ಮತ್ತು ಚಾಲ್ತಿಯಲ್ಲಿರುವ ಕೌನ್ಸಲಿಂಗ್ ನಿಯಮಗಳನ್ನು ಉಲ್ಲಂಘಿಸಿ ಇತ್ತೀಚಿಗೆ ಹಲವಾರು ಆಹಾರ ಸುರಕ್ಷತಾಧಿಕಾರಿಗಳ /ಅಂಕಿತ ಅಧಿಕಾರಿಗಳ ವರ್ಗಾವಣೆ/ಸ್ಥಳನಿಯುಕ್ತಿ ಮಾಡಲಾಗಿದ್ದು, ಸರ್ಕಾರ ಈ ಬಗ್ಗೆ ಯಾವ ಕ್ರಮ ಕೈಗೊಳ್ಳುವುದು; ಅಕ್ರಮ ವರ್ಗಾವಣೆ ದಂಧೆ ನಡೆಸಿರುವ ಅಧಿಕಾರಿಗಳ ವಿರುದ್ಧ ಸರ್ಕಾರ ತನಿಖೆ ನಡೆಸಲಾಗುವುದೇ;(ವರ್ಗಾವಣೆಯ ಸಂಪೂರ್ಣ ವಿವರಗಳನ್ನು ಒದಗಿಸುವುದು)

(ಈ) ಉಪ ಆಯುಕ್ತರು (ಆಡಳಿತ), ಉಪ ಆಯುಕ್ತರು (ಸ್ಕ್ವಾಡ್) ಹಾಗೂ ಈ ಇಲಾಖೆಯಲ್ಲಿನ ಇತರೆ ವೈದ್ಯರುಗಳ ವಿರುದ್ಧ ಯಾವ ಯಾವ ದೂರುಗಳು ಎಲ್ಲಿ ಎಲ್ಲಿ ದಾಖಲಾಗಿರುತ್ತೆ; (ಸಂಪೂರ್ಣ ವಿವರ ಒದಗಿಸುವುದು)

(ಉ) ಆಹಾರ ಸುರಕ್ಷತಾ ವಿಭಾಗಕ್ಕೆ ಪ್ರತ್ಯೇಕವಾಗಿ ಆಯುಕ್ತರನ್ನು ನೇಮಿಸಲು ಸರ್ಕಾರಕ್ಕಿರುವ ತೊಂದರೆ ಏನು; ಯಾವ ಕಾಲಮಿತಿಯಲ್ಲಿ ಆಯುಕ್ತರನ್ನು ನೇಮಕ ಮಾಡಲಾಗುವುದು; ಇತರೆ ಸಿಬ್ಬಂದಿಗಳ/ಅಧಿಕಾರಿಗಳ ನೇಮಕಾತಿಯನ್ನು ಯಾವ ಕಾಲಮಿತಿಯಲ್ಲಿ ಮಾಡಲಾಗುವುದು?